ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಖಜಾನೆ–2 ನೊಂದಾಣಿ 01/2016–17 ದಿನಾಂಕ: 23.11.2016

**ಪ್ರಥಮಾಧ್ಯತೆ**

# <u>ಸುತ್ತೋಲೆ</u>

**ವಿಷಯ:** ಖಜಾನೆ–2 ತಂತ್ರಾಂಶದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಣ ಸೆಳೆಯುವ ಅಧಿಕಾರಿಗಳಾಗಿ ನೊಂದಾಯಿಸುವ ಬಗ್ಗೆ.

**ಉಲ್ಲೇಖ:** ದಿನಾಂಕ: 19.11.2016 ರಂದು ಮಾನ್ಯ ಆಯುಕ್ತರು ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸೂಚಿಸಿದಂತೆ.

ಉಲ್ಲೇಖಿತ ದಿನಾಂಕ: 19.11.2016 ರಂದು ಮಾನ್ಯ ಆಯುಕ್ತರು ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸೂಚಿಸಿದಂತೆ. ಖಜಾನೆ–2 ತಂತ್ರಾಂಶದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಣ ಸೆಳೆಯುವ ಅಧಿಕಾರಿಗಳಾಗಿ ನೊಂದಾಯಿಸುವ ಬಗ್ಗೆ ಅನುಸರಿಸಬೇಕಾದ ವಿಧಿವಿಧಾನಗಳ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದೆ. ಅದರಂತೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಅನುಬಂಧ–1 ಹಾಗೂ ಅನುಬಂಧ–2 ರಲ್ಲಿ ಸವಿವರವಾಗಿ ಹಣ ಸೆಳೆಯುವ ಅಧಿಕಾರಿಗಳು ಅನುಸರಿಸಬೇಕಾದ ವಿಧಿವಿಧಾನಗಳ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

1. ಖಜಾನೆಯಿಂದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳೂ ಖಜಾನೆ–2 ತಂತ್ರಾಂಶದಲ್ಲಿ ನಮೂನೆ **R**–1 ಹಾಗೂ ನಮೂನೆ **R**–2 ಅನ್ನು ಭರ್ತಿ ಮಾಡಿ ದಿನಾಂಕ:26.11.2016 ರೊಳಗೆ ತಮ್ಮ ಜಿಲ್ಲಾ/ತಾಲ್ಲೂಕು ವ್ಯಾಪ್ತಿಯ ಖಜಾನಾಧಿಕಾರಿಗಳಿಗೆ ನೀಡಿ ನೊಂದಾಯಿಸಿಕೊಳ್ಳುವುದು.
2. ದಿನಾಂಕ: 22.11.2016 ರಂದು ಈ ಕಛೇರಿಯಿಂದ ಕಳುಹಿಸಿದ ಎಸ್.ಎಂ.ಎಸ್ ನಲ್ಲಿ ಪ್ರಸ್ತಾಪಿಸಿದಂತೆ, ಖಜಾನೆ–2 ನಲ್ಲಿ ನೊಂದಾಣಿಯಾದ ನಂತರ, ನೊಂದಾಣಿಯಾದ ಬಗ್ಗೆ ವರದಿಯನ್ನು ತಪ್ಪದೇ, sadpiegov@gmail.com & lpoegov@gmail.com ಇ–ಮೈಲ್ ಕಳುಹಿಸತಕ್ಕದ್ದು.

**(ಎಸ್.ಕಾತ್ಯಾಯನಿ ದೇವಿ)**
**ಜಂಟಿ ನಿರ್ದೇಶಕರು (ಆಡಳಿತ)**
**ಹಾಗೂ ಇ–ಆಡಳಿತ ನೋಡಲ್ ಅಧಿಕಾರಿಗಳು**

ಪ್ರತಿಯನ್ನು

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
2. ಅಪರ ಆಯುಕ್ತರು ಧಾರವಾಢ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಅಪರ ಆಯುಕ್ತರು ಗುಲ್ಬರ್ಗಾ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
6. ಕಛೇರಿ ಪ್ರತಿ.